



**International Journal of Kannada Research**
www.kannadajournal.com


# International Journal of Kannada Research


Peer Reviewed Journal, Refereed Journal, Indexed Journal

ISSN: 2454-5813, Impact Factor: RJIF 4.89


## *Publication Certificate*

This certificate confirms that "ಡಾ.ಎಸ್.ಬಿ.ಚನ್ನಗೌಡ್ರ." has published manuscript titled "ಜಂಗಮ ಕವಿ ಸರ್ವಜ್ಞ".


Details of Published Article as follow:

| | | |
|---|---|---|
| Volume | : | **8** |
| Issue | : | **3** |
| Year | : | **2022** |
| Page Number | : | **109-112** |

Certificate No.: **9-1-28**

Yours Sincerely,

Akhil Gupta
Publisher
International Journal of Kannada Research
www.kannadajournal.com
Tel: +91-9711224068




International Journal of Kannada Research
www.kannadajournal.com

ISSN: 2454-5813
IJKR 2022; 8(3): 109-112
© 2022 IJKR
www.kannadajournal.com
Received: 21-06-2022
Accepted: 25-07-2022

ಡಾ.ಎಸ್.ಬಿ.ಚನ್ನಗೌಡ್ರ
ಎಂ.ಎ ಪಿಹೆಚ್.ಡಿ, ಮುಖ್ಯಸ್ಥರು
ಕನ್ನಡ ವಿಭಾಗ, ಪ್ರಾಂಶುಪಾಲರು
ಬಿ.ಆರ್.ತಂಬಾಕದ ಪ್ರಥಮ ದರ್ಜೆ
ಕಲಾ ವಾಣಿಜ್ಯ ಹಾಗೂ ವಿಜ್ಞಾನ
ಮಹಾವಿದ್ಯಾಲಯ, ಹಾಗೂ
ಸ್ನಾತಕೋತ್ತರ ಅಧ್ಯಯನ ಕೇಂದ್ರ
ಹಿರೇಕೆರೂರು. ಜಂಗಮವಾಣಿ

**Corresponding Author:**
ಡಾ.ಎಸ್.ಬಿ.ಚನ್ನಗೌಡ್ರ
ಎಂ.ಎ ಪಿಹೆಚ್.ಡಿ, ಮುಖ್ಯಸ್ಥರು
ಕನ್ನಡ ವಿಭಾಗ, ಪ್ರಾಂಶುಪಾಲರು
ಬಿ.ಆರ್.ತಂಬಾಕದ ಪ್ರಥಮ ದರ್ಜೆ
ಕಲಾ ವಾಣಿಜ್ಯ ಹಾಗೂ ವಿಜ್ಞಾನ
ಮಹಾವಿದ್ಯಾಲಯ, ಹಾಗೂ
ಸ್ನಾತಕೋತ್ತರ ಅಧ್ಯಯನ ಕೇಂದ್ರ
ಹಿರೇಕೆರೂರು. ಜಂಗಮವಾಣಿ

# ಜಂಗಮ ಕವಿ ಸರ್ವಜ್ಞ

## ಡಾ.ಎಸ್.ಬಿ.ಚನ್ನಗೌಡ್ರ

### ಸರ್ವಜ್ಞನ ಜನ್ಮವೃತ್ತಾಂತ

ಸರ್ವಜ್ಞ ಲೋಕಸಂಚಾರಿ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ನಿಂತ ಕಡೆ ನಿಲ್ಲದೆ ದೇಶ ಸಂಚಾರಿಯಾದ ಸರ್ವಜ್ಞ ಸಮಾಜದ ಒಳಹೊರಗೆಲ್ಲ ಸುತ್ತಾಡಿ ಕೊನೆಗೆ ಜನಸಾಮಾನ್ಯರೊಡನೆ ಬದುಕಿದವನು. ಅನುಭವಗಳನ್ನು ಬಹುಶ ಯಾರು ಹುಡುಕಿಕೊಂಡು ಹೋಗುವುದಿಲ್ಲ ಲೋಕಕ್ಕು ನಮಗೂ ಇರುವ ನಿರಂತರ ಸಂಪರ್ಕ ಹಾಗೂ ಸಂಘರ್ಷಗಳ ಪರಿಣಾಮಗಳೇ ಅನುಭವಗಳಾಗಿ ಪ್ರಜ್ವಲಿಸುತ್ತವೆ. ಸರ್ವಜ್ಞನ ಸಮಾಜ ಪ್ರಜ್ಞೆ ಹಾಗೂ ಅವನು ಕಂಡ ಜೀವನ ದರ್ಶನ ಅಮೋಘವಾದದ್ದು. ತಿಳಿಯಾದ ಕೊಳದಲ್ಲಿ ಸೂರ್ಯ ಸ್ಪಷ್ಟವಾಗಿ ಪ್ರತಿಬಿಂಬಿಸುವಂತೆ ಸೂಕ್ಷ್ಮ ಸ್ವಭಾವದ ಅವನ ಅಂತರಂಗದಲ್ಲಿ ಸಮಾಜದ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳೆಲ್ಲ ಪ್ರತಿಫಲಿತವಾಗಿವೆ. ಸರ್ವಜ್ಞ ವಿರಕ್ತನಾದರು ಜಗತ್ತನ್ನು ತೊರೆದವನಲ್ಲ. ಸಂತೆಯ ನಡುವಿದ್ದುಕೊಂಡೇ ಅನಂತವನ್ನು ಸಾಧಿಸಿದ ಮಹಾ ಸಂತನೀತ. ನೆಲದ ಮೇಲೆ ನಿಂತು ಬಯಲನ್ನು ತಬ್ಬಲು, ಗಾಳಿಯನ್ನು ಹುರಿಮಾಡಲು ಪ್ರಯತ್ನಿಸಿದ ಸಾಧಕವರಣ್ಯ ಸರ್ವಜ್ಞ. ಸಂಸಾರದ ಮರ್ಮವನ್ನು ಮನಗಂಡು ಕೇವಲ ತನ್ನೊಬ್ಬನ ಶ್ರೇಯಸ್ಸಿಗಾಗಿ ಕಾಡು ಸೇರಿ ತಪಸ್ಸಿಗೆ ಕೂಡದೇ ಜಗದ ಜಗುಲಿಯ ನಡುವಿದ್ದುಕೊಂಡೇ ಇಡೀ ಸಮಾಜದ ಶ್ರೇಯಸ್ಸಿಗಾಗಿ ದುಡಿದ ಮಹಾ ತ್ಯಾಗಿ ಸರ್ವಜ್ಞ. ಜೀವನ ವಿಮರ್ಶೆ, ಆತ್ಮೋದ್ಧಾರ ಹಾಗೂ ಸಮಾಜ ಕಲ್ಯಾಣ ಸಾಧನೆಗಳು ಬದುಕಿನ ಅಂತಿಮ ಗುರಿಯೆಂದು ತೋರಿಸಿಕೊಟ್ಟ ಮಹಾ ಮಾರ್ಗದರ್ಶಿ. ಮಧು ಮಾತಿನ ಮುಲಕವೋ, ಕಟು ನುಡಿಯ ಮುಲಕವೋ ಜನರ ಬದುಕನ್ನು ತಿದ್ದಿ ಹಸನಗೊಳಿಸಬೇಕೆಂದು ಸಂಕಲ್ಪಿಸಿ ಜೀವನದ ಮೌಲ್ಯಗಳನ್ನು ರೂಪಿಸಿದ ಸಮಾಜ ಸುಧಾರಕ ಸರ್ವಜ್ಞ. ರಾಜಾಶ್ರಯದ ಹಂಗಿಲ್ಲದೆ ಗುರುಮನೆಗಳ ಆಶ್ರಯವಿಲ್ಲದೆ ಲೋಕವನ್ನೇ ನೆಲೆಯಾಗಿರಿಸಿಕೊಂಡು ಲೋಕಾನುಭವವನ್ನು ಪಡೆದವನು. ಲೋಕ ಸಂಚಾರದಲ್ಲಿ ತಾನು ಕಂಡು ಕಲಿತ ಬದುಕಿನ ಪಾಠಗಳಿಂದ ಸಮಾಜವನ್ನು ತಿದ್ದಲು ಕಲಾತ್ಮಕವಾದ ತ್ರಿಪದಿಗಳನ್ನು ರಚಿಸಿದನು. ಕಾಲಿಗೆ ಚಕ್ರ ಕಟ್ಟಿಕೊಂಡವನಂತೆ ದಶ ದಿಕ್ಕುಗಳಿಗೂ ಸಂಚರಿಸುತ್ತ ಜನತೆಯ ಕವಿ ಎನಿಸಿಕೊಂಡಿದ್ದಾನೆ. ಆ ಮೂಲಕ ಸಾಹಿತ್ಯವೆಂದರೆ ಜನ ಜೀವನದ ಪ್ರತಿಬಿಂಬ ಎನ್ನುವುದನ್ನು ಅಕ್ಷರಶಃ ತೋರಿಸಿದ್ದಾನೆ. ಒಪ್ಪುವ ಮೌಲ್ಯಗಳನ್ನು ಪ್ರಶಂಸಿಸುತ್ತ, ಅಪಮೌಲ್ಯಗಳನ್ನು ಟೀಕಿಸುತ್ತಾ ಲೋಕಕ್ಕೆ ಗುರುವಾಗಿದ್ದಾನೆ ಸರ್ವಜ್ಞ. ಸರ್ವಜ್ಞನ ಕಾಲದೇಶಗಳಿಗಿಂತ ಆತನ ಹುಟ್ಟಿನ ಬಗೆಗೆ ಇರುವ ಜಿಜ್ಞಾಸೆ ಇಂದಿಗೂ ಬಗೆಹರಿಯದೆ ಕಗ್ಗಂಟಾಗಿ ಉಳಿದಿರುವುದು ಸ್ಪಷ್ಟ. ಇದಕ್ಕೆ ಕಾರಣ ಆತನ ಕುರಿತಾದ ಶಾಸನಗಳಾಗಲಿ ಐತಿಹಾಸಿಕ ದಾಖಲೆಗಳಾಗಲಿ ಅಥವಾ ಇನ್ನಾವುದೊ ಕೃತಿಗಳಲ್ಲಿ ಉಲ್ಲೇಖಗಳಾಗಲಿ ದೊರೆಯದೆ ಇರುವುದರಿಂದ ಹುಟ್ಟಿನ ಬಗೆಗೆ ಅನೇಕರು ಅನೇಕ ರೀತಿಯಾಗಿ ಆತನ ಜನ್ಮವೃತ್ತಾಂತವನ್ನು ಉಲ್ಲೇಖಿಸುವುದುಂಟು. ಹೀಗೆ ವಿವಾದಾಸ್ಪದ ಹುಟ್ಟಿನ ಗುಟ್ಟನ್ನು ಗ್ರಂಥಸ್ಥ ಪದ್ಯಗಳು ಮತ್ತು ಜನರೂಢ ಕಥೆಯ ಆಧಾರಗಳಿಂದ ಉತ್ತಂಗಿ ಚನ್ನಪ್ಪನವರು ಧಾರವಾಡ ಜಿಲ್ಲೆಗೆ ಸೇರಿದ ಅಂದರೆ ಈಗಿನ ಹಾವೇರಿ ಜಿಲ್ಲೆಯ ಮಾಸೂರು ಎಂಬ ಗ್ರಾಮದಲ್ಲಿ ಬಸವರಸನೆಂಬ ಬ್ರಾಹ್ಮಣನಿದ್ದನು. ಇವನಿಗೆ ಮಲ್ಲರಸನೆಂತಲೂ ಹೆಸರಿದ್ದಂತೆ ಒಂದು ಪದ್ಯದಿಂದ ತಿಳಿದು ಬರುತ್ತದೆ. ಇವನ ಹೆಂಡತಿಯ ಹೆಸರು ಮಲ್ಲವ್ವ ಈಕೆಯನ್ನು ನೆರೆಹೊರೆಯ ಸ್ತ್ರೀಯರು ಪ್ರೀತಿಯಿಂದ ಮಲ್ಲವಕ್ಕನೆಂತಲೂ ಕರೆಯುವರು. ಬಹುದಿನದ ಬಂಜೆತನವನ್ನು ತೆಗೆದು ಈಕೆಯು ಒಂದು ದಿನ ತನ್ನ ಮನದಳಲನ್ನು ಗಂಡನಾದ ಬಸವರಸನಿಗೆ ಅರಿಕೆ ಮಾಡುತ್ತಾಳೆ.

ಮಕ್ಕಳಿಲ್ಲವು ಎಂದು । ಅಕ್ಕಮಲ್ಲಮನು ।
ದುಕ್ಕವ ಬಸವರಸಗರುಪಲು ಕಾಶಿಯ ।
ಮುಕ್ಕಣ್ಣನೊಲಿದ ಸರ್ವಜ್ಞ ॥

ಅವನು ಯಾತ್ರಾರ್ಥವಾಗಿ ಕಾಶಿಗೆ ಹೋಗಿ ವಿಶ್ವನಾಥನಲ್ಲಿ ಒಂದು ಗಂಡು ಮಗುವನ್ನು ಬೇಡಿಕೊಂಡನು. ಆಗ ಶಿವನು ಇವನ ಭಕ್ತಿಗೆ ಮೆಚ್ಚಿ ಪ್ರಸನ್ನನಾಗಿ ಒಂದು ಅನ್ನದ ಉಂಡೆಯನ್ನು ತಂದು ಪಿಂಡಪ್ರಸಾದವನ್ನು ನುಂಗು. ನೀನು ಮೊದಲು ಎಲ್ಲಿ ಗರ್ಭದಾನ ಮಾಡುವಿಯೋ ಅಲ್ಲಿ ನಿನಗೊಬ್ಬ ವಿಶೇಷ ಪುತ್ರನು ಹುಟ್ಟುವನೆಂದು ಪ್ರಸಾದ ನೀಡುತ್ತಾನೆ.

ಮಾಸೂರ ಬಸವರಸ । ಕೂಸನೀಶನ ಕೇಳೆ ।
ಕಾಶಿಯ ಅಭವನೊಳು ಪಡೆದ ವರವದುವೆ ।
ಸೂಸಿತೆಂತೆನಲು ಸರ್ವಜ್ಞ ॥
ಗಂಡಾಗಬೇಕೆಂದು । ಪಿಂಡವನು ನುಂಗಲದು ।
ರಂಡೆ ಮಾಳವ್ವೆಯೊಳು ಬರುವದೆಂತೆನಲು ।
ಕಂಡದನು ಪೇಳ್ವೆ ಸರ್ವಜ್ಞ ॥

ಈ ಪ್ರಕಾರ ವರವನ್ನು ಪಡೆದು ಬಸವರಸನು ತೀರ್ಥಯಾತ್ರೆಯನ್ನು ಮುಗಿಸಿ ಮಾಸೂರಿನಲ್ಲಿದ್ದ ತನ್ನ ಮನೆಗೆ ಹಿಂದಿರುಗಿ ಬರುತ್ತಿರುವಾಗ ದಾರಿಯಲ್ಲಿ ಅಂಬಲೂರು ಎಂಬ ಗ್ರಾಮದೊಳು ತಂಗಿದನು. ಮಾರ್ಗಾಯಾಸದಿಂದ ಹಸಿದಿದ್ದ ಇವನು ಹೊಸ ಗಡಿಗೆ ಮಡಿಕೆಗಳನ್ನು ಕೊಂಡುಕೊಳ್ಳುವ ಉದ್ದೇಶದಿಂದ ಅಲ್ಲಿಯೆ ಮಾಳಿ ಎಂಬ ಕುಂಬಾರ ಸ್ತ್ರೀಯ ಮನೆಗೆ ಹೋಗಿ ಬೇಕಾದ ಪಾತ್ರೆಗಳನ್ನು ತೆಗೆದುಕೊಂಡು ಒಂದು ಬಾವಿಯ ಸಮೀಪದಲ್ಲಿ ಅಡುಗೆಗೆ ಮಾಡಲು ಸಿದ್ಧನಾದಾಗ ಮುಗಿಲಲ್ಲಿ ಮೋಡ ಮುಸುಕಿ ಭಯಂಕರವಾದ ಮಳೆ ಸುರಿಯತೊಡಗುತಿತ್ತು. ಹಸಿದು ಕಂಗಾಲಾಗಿದ್ದ ಬಸವರಸನು ಮಳೆಯಲ್ಲಿ ತೋಯಿಸಿಕೊಂಡು ಆಶ್ರಯವನ್ನು ಹುಡುಕುತ್ತ, ಆಗಲೆ ಪರಿಚಿತಳಾಗಿದ್ದ ಮಾಳಿ ಎಂಬ ಆ ಕುಂಬಾರ ವಿಧವೆಯ ಬಳಿಗೆ ಹೋಗಲು, ಅವಳು ಇವನನ್ನು ಮನೆಯೊಳಗೆ ಸೇರಿಸಿಕೊಂಡು ಶೈತ್ಯೋಪಚಾರ ಮಾಡಿದಳು. ಆಕೆಯು ಪುಷ್ಟಳು ಸುಂದರಳೂ ಆಗಿದ್ದರಿಂದ ಇಬ್ಬರಲ್ಲಿ ಸಹಜವಾಗಿ ಪರಸ್ಪರ ಮೋಹವುಂಟಾಗಿ ಮಳೆಯು ಭೋರ್ಗರೆಯುತ್ತಿರಲು ಯಾರು ಇಲ್ಲದಂತಾದ ಆ ಸಮಯದಲ್ಲಿ ಯಾವ ಅಭ್ಯಂತರವಿಲ್ಲದೆ ಅವರ ಭೋಗೆಚ್ಛೆಗೆ ಅನುಕೂಲ ಸಂದರ್ಭ ಒದಗಿದಂತಾಯಿತು.
ಗರ್ಭವತಿಯಾದ ಆಕೆಯು ಹತ್ತು ತಿಂಗಳು ಹೊತ್ತು ಕಾಳಿ ಎಂಬ ಸೂಲಗಿತ್ತಿ ಇಲ್ಲವೆ ನೆರೆಹೆಂಗಸಿನ ಸಹಾಯದಿಂದ ಗಂಡು ಮಗುವನ್ನು ಹಡೆದಳು. ಅವನು ಬೆಳೆದು ಇನ್ನೂ ಚಿಕ್ಕವನಿರುವಾಗಲೇ ತಾನು ಶಿವಪ್ರಸಾದದಿಂದ ಹುಟ್ಟಿದ ಕಾರಣ ಶಿವನೂ ಪಾರ್ವತಿಯು ತನ್ನ ನಿಜ ತಂದೆ ತಾಯಿಗಳೆಂದು ಪುಷ್ಪದತ್ತನೆಂಬ ನಾಮದಿಂದ ಕೈಲಾಸದಲ್ಲಿ ಗಣೇಶ್ವರನಾಗಿ ಮೆರೆಯುತ್ತಿದ್ದ ತನ್ನನ್ನು ಈಶ್ವರನು ವಿಶೇಷ ಕಾರಣದಿಂದ ಈ ಜಗತ್ತಿಗೆ ಬರಮಾಡಿದ್ದರಿಂದ ನಿಮಿತ್ಯ ಕಾರಣರಾದ ಬಸವರಸನೂ ಮಾಳಿಯೂ ತನ್ನ ಹೆತ್ತವರಲ್ಲವೆಂದೂ ಅವರಿಗೆ ತಂದೆ ತಾಯಿಗಳೆಂದು ತಾನು ಎಂದಿಗೂ ಅನ್ನಲಿಕ್ಕಿಲ್ಲವೆಂದು ವಾದಿಸಿ ಅವರನ್ನೂ ಅವರ ನಡತೆಯನ್ನೂ ಜರೆದು ಮಾತಾಡಹತ್ತಿದನು. ಇದರಿಂದ ಅವರು ಕೋಪಾವೇಶವಾಗಿ ಅವನನ್ನು ಮನೆಬಿಟ್ಟು ಹೊರಗೆ ಹಾಕಿದರು.

ಹೆತ್ತವಳು ಮಾಳಿಯೆ । ನ್ಯೊತ್ತಿ ತೆಗೆದವಳು ಬೆ ।
ನ್ಯೊತ್ತಿ ಹಿಡಿದವಳು ಕಾಳಿ ತಾ ಮೊರದೊಳಗೆ ।
ಬಿತ್ತರಿಸಿದವಳು ಸರ್ವಜ್ಞ ॥

ಸರ್ವಜ್ಞನ ಅಂಕಿತದಲ್ಲಿರುವ ಜನ್ಮವೃತ್ತಾಂತವು ಅಚ್ಚಾದ ಎಲ್ಲ ಗ್ರಂಥಗಳಲ್ಲಿಯೂ ಏಕಪ್ರಕಾರವಾಗಿ ಕಾಣಿಸಿಕೊಂಡಿದೆ. ಆದರೆ ಕೈಬರಹದ ಕೆಲವು ಪ್ರತಿಗಳಲ್ಲಿ ಕಾಲಜ್ಞಾನ ಪದ್ಧತಿಯ ವಚನಗಳೊಂದಿಗೆ ಇನ್ನು ಕೆಲವು ಪ್ರತಿಗಳ ಆರಂಭದಲ್ಲಿ ಹಾಗೂ ಬೇರೆ ಕೆಲವು ಪ್ರತಿಗಳ ಅಂತ್ಯದಲ್ಲಿ ಜೋಡಣೆಗೊಂಡಿದೆ. ಇದಕ್ಕೆ ವ್ಯತಿರಿಕ್ತವಾಗಿ ಕೆಲವೊಂದು ಪ್ರತಿಗಳಲ್ಲಿ ಕಾಲಜ್ಞಾನ ಪದ್ಯಗಳೂ ಇಲ್ಲ. ಈ ವೃತ್ತಾಂತಗಳನ್ನೊಳಗೊಂಡ ವಚನಗಳೂ ಇಲ್ಲ. ಇದನ್ನು ಪರಿಭಾವಿಸಿದಲ್ಲಿ ಈ ವೃತ್ತಾಂತದಲ್ಲಿ ಉಕ್ತವಾದಂತಹ ಅಂಬಲೂರಿನಲ್ಲಿ ಜನಿಸಿದ ಸರ್ವಜ್ಞನೇ 'ಕಾಲಜ್ಞಾನ' ಬರೆದಿರಬೇಕೆಂದೂ ಇತರ ತ್ರಿಪದಿಗಳನ್ನು ಬರೆದಂಥವನು ಬೇರೊಬ್ಬ ಸರ್ವಜ್ಞನಾಗಿರಬೇಕೆಂದು ಸಂದೇಹ ಬರಬಹುದಾಗಿದೆ ಎಂದು ಉತ್ತಂಗಿ ಚನ್ನಪ್ಪನವರು ಪ್ರಾಸ್ತಾವಿಕವಾಗಿ ನುಡಿದು ಆ ಕಾಲಕ್ಕೆ ಅಂದರೆ ಕ್ರಿ.ಶ.೧೯೨೦ರ ಸುಮಾರಿಗೆ ಪ್ರಚಲಿತವಿದ್ದ ಈ ಜನ್ಮವೃತ್ತಾಂತ ಕುರಿತು ಭಿನ್ನಾಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ.
ಇದು ಕೇವಲ ಜನ್ಮವನ್ನು ಪಡೆದು ಮೇಲೆನಿಸಿಕೊಂಡ ಜನರ ಜೀವನವನ್ನು ಹೇಳುವುದಕ್ಕೆ ನೇಮಕವಾದ ಸಾಮಾನ್ಯ ಕಥೆಯೊಂದು ಪುಷ್ಪದತ್ತನೆಂಬ ಕಲ್ಪಿತ ಹೆಸರಿನಿಂದ ಇದು ಮತ್ತಷ್ಟು ಸ್ಪಷ್ಟವಾಗುವುದೆಂದು ಕೆಲವರು ವಾದಿಸಿದರೆ, ಇದನ್ನೊಪ್ಪದ ಬೇರೆ ಕೆಲವರು ಸರ್ವಜ್ಞನೆಂಬುವನು ಆರಾಧ್ಯ ಬ್ರಾಹ್ಮಣನಾದ ಬಸವರಸನ ಧರ್ಮಪುತ್ರ, ಇವನು ಲಿಂಗಾಯತ ಮತವನ್ನು ಸ್ವೀಕರಿಸಿದ ಬಳಿಕ ಜಾತಿ, ಕುಲ, ಮೂರ್ತಿಪೂಜೆ, ಆಚಾರ ಮೊದಲಾದವುಗಳನ್ನು ವಿಪರೀತವಾಗಿ ಖಂಡಿಸುತ್ತ ನಡೆದದ್ದರಿಂದ ಜನರಲ್ಲಿ ದ್ವೇಷವು ಹೆಚ್ಚಲು ಜಾತ್ಯಾಭಿಮಾನಿಯಾದ ಬ್ರಾಹ್ಮಣನೊಬ್ಬನು ಧರ್ಮಾಂತರ ಮಾಡಿದ. ಸರ್ವಜ್ಞನ ಬಗ್ಗೆ ಜನರಲ್ಲಿ ತಿರಸ್ಕಾರ ಉಂಟಾಗಲೆಂದು ಇಂಥ ಅಸಂಬದ್ಧ ಕಥೆಯನ್ನು ಹುಟ್ಟಿಸಿರಬೇಕೆಂದು ಅಭಿಪ್ರಾಯಪಡುವರು. ಇವರ ಹೇಳಿಕೆಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ತೋರಿದರೂ ಸರ್ವಜ್ಞನ ಸಂಬಂಧವಾಗಿ ಈಗ ಪ್ರಚಾರದಲ್ಲಿರುವ ಕಥೆಯು ಕೇವಲ ಕಲ್ಪಿತವೆಂದೇ ಉಭಯ ಮತಗಳವರ ತಾತ್ಪರ್ಯವು ಎಂಬುದನ್ನು ಎತ್ತಿ ತೋರಿಸಿ ತಮ್ಮ ಸ್ಪಷ್ಟ ನಿಲುವನ್ನು ಈ ರೀತಿ ವಿವರಿಸುತ್ತಾರೆ. ವಿವರಿಸುವಾಗ ಒಂದು ಪಕ್ಷ ಹೀಗೆ ಊಹಿಸುವುದಕ್ಕೆ ಕೆಲವು ಕಾರಣಗಳಿದ್ದರೂ ಈ ವೃತ್ತಾಂತವು ಕೇವಲ ನಿರಾಧಾರವಾದದ್ದೆಂದು, ಇದರಲ್ಲಿ ಎಳ್ಳಷ್ಟು ಸತ್ಯವಿರುವುದಿಲ್ಲವೆಂದು ಹೇಳುವುದು ನಮಗೆ ಅಷ್ಟು ಸಮಂಜಸವಾಗಿ ತೋರುವುದಿಲ್ಲವೆಂಬುದು ಉತ್ತಂಗಿ ಚನ್ನಪ್ಪನವರ ಅಭಿಪ್ರಾಯವಾಗಿದೆ.

ತಂದೆ ಕುಂಬಾರ ಮಲ್ಲ । ತಾಯಿ ಮಳಲಾದೇವಿ ।
ಇಂದು ಶೇಖರನ ವರಪುತ್ರ ಧರಣಿಗೆ ।
ಬಂದು ಜನಿಸಿಹ ಸರ್ವಜ್ಞ ॥

ಎಂಬ ವಚನ ಮತ್ತು ಕುಂಬಾರನ ಬಗೆಗಿರುವ ಸರ್ವಜ್ಞನ ವಿಶೇಷ ಅಭಿಮಾನ ಇವುಗಳನ್ನು ಆಧಾರವಾಗಿಟ್ಟುಕೊಂಡು, ತಂದೆ ಕುಂಬಾರ ಮಲ್ಲ ಎಂದು ಪುರಾತನ ಶಿವಶರಣ ಕುಂಬಾರ ಗುಂಡಯ್ಯನ ಕುಲದವನಾಗಿದ್ದಿರಬಹುದೆಂದು ಊಹಿಸಿದ್ದಾರೆ. ಸರ್ವಜ್ಞ ಕುಂಬಾರ ಮನೆತನದಲ್ಲಿ ಹುಟ್ಟಿರುವನೆಂಬ ಕಾರಣದಿಂದಲೆ, ಇನ್ನಾವ ಕಾರಣವನ್ನು ಉದ್ಧರಿಸದೆಯೇ ಒಮ್ಮೆಲೇ ಸರ್ವಜ್ಞ ಕುಂಬಾರ ಗುಂಡಯ್ಯನ ಕುಲದವನೆಂಬ ತೀರ್ಮಾನಕ್ಕೆ ಧುಮುಕುವುದು ಸಮರ್ಪಕವಾಗಲಾರದು.
ಆದ್ದರಿಂದ ಸರ್ವಜ್ಞನು ಪುರಾತನ ಶಿವಶರಣ ಕುಂಬಾರ ಗುಂಡಯ್ಯನ ಕುಲದವನಾಗಿರಬೇಕೆಂಬುದಕ್ಕೆ ಈ ಆಂತರಿಕ ಹಾಗೂ ಬಹಿರಂಗದ ಆಧಾರಗಳು ಸಹಾಯವಾಗುತ್ತವೆ. ಅವನು

ವೀರಶೈವನೆಂಬುದಕ್ಕೆ ಖಚಿತಪಡಿಸಲು ಶ್ರೀ.ಎ.ಆರ್.ಕೃಷ್ಣಶಾಸ್ತ್ರೀಗಳು ಪಡುವ ಅಭಿಪ್ರಾಯವನ್ನು ಗಮನಿಸಬಹುದು.ಅವರ ಗ್ರಂಥವನ್ನು ನೋಡಿದರೆ ಷಟ್ಸ್ಥಲ, ಅಷ್ಟಾವರಣ ಮುಂತಾದ ವೀರಶೈವ ಧರ್ಮಕ್ಕೆ ಸಂಬಂಧ ಪಡುವ ಕೆಲವು ವಿಚಾರಗಳನ್ನು ಕುರಿತ ಪದ್ಯಗಳು ದೊರೆಯುತ್ತವೆ .ಆದ್ದರಿಂದ ಸರ್ವಜ್ಞನು ವೀರಶೈವನೆನ್ನಬಹುದು. ಅವನ ಪದ್ಯಗಳು ವಚನಗಳು ಎಂದು ರೂಢಿಯಾಗಿರುವುದು ಇದನ್ನೇ ಸೂಚಿಸುತ್ತವೆ. ವಚನ ಎಂದರೆ ಮಾತು ಹೇಳಿದ್ದು ಇದಕ್ಕೆ ಗದ್ಯ ರೂಪದ ಉಕ್ತಿ ನೈತಿಕ ಧಾರ್ಮಿಕ ಭಾವಗಳನ್ನೊಳಗೊಂಡ ನುಡಿ ಎಂಬ ಅರ್ಥವು ಇದೆ. ಇಂತಹ ವಚನ ಸಾಹಿತ್ಯವನ್ನು ಕನ್ನಡದಲ್ಲಿ ಸೃಷ್ಟಿಸಿ ಬೆಳೆ ಮಾಡಿದವರು ವೀರಶೈವರು. ಸರ್ವಜ್ಞನು ವೀರಶೈವನೆಂಬುದನ್ನು ರಂ.ಶ್ರೀ.ಮುಗುಳಿ, ಬಿ.ಶಿವಮೂರ್ತಿಶಾಸ್ತ್ರೀ, ಶ್ರೀ.ಉತ್ತಂಗಿ ಚನ್ನಪ್ಪ, ಶ್ರೀ.ಬಸವನಾಳ, ಪಿ.ಜಿ.ಹಳಕಟ್ಟಿ, ದೇಶಪಾಂಡೆ ಮನೋಹರರಾಯರು, ಆರ್.ಸಿ.ಹಿರೇಮಠ, ಉಮಾಪತಿ ಶಾಸ್ತ್ರೀಗಳು ಇವರೆ ಮೊದಲಾದವರು ಒಪ್ಪಿಕೊಂಡಿದ್ದಾರೆ ಆದ್ದರಿಂದ ಅಂತೂ ಸರ್ವಜ್ಞನು ವೀರಶೈವ ಕುಂಬಾರ ಗುಂಡಯ್ಯನ ಮತದವನೆಂದು ಹೇಳಲು ಯಾವ ಅಭ್ಯಂತರವೂ ಇಲ್ಲವೆಂದು ತೋರುತ್ತದೆ.

ಕೀರ್ತಿನಾಥ ಕುರ್ತಕೋಟಿ ಅವರು ಅಂಬಲೂರಿನ ಮಾಳಿ ಮತ್ತು ಬ್ರಾಹ್ಮಣನಾಗಿದ್ದ ಮಲ್ಲರಸರ ಸಂತಾನ ಇವನು. ಚಿಕ್ಕಂದಿನಿಂದಲೆ ತಾಯಿ ತಂದೆಯರ ಪ್ರೀತಿಯಿಂದ ವಂಚಿತನಾಗಿ ಸಮಾಜದ ಕೂಸಾಗಿ ಇವನು ಬೆಳೆದಿರಬೇಕು ಅ.ನ.ಕೃಷ್ಣರಾಯ ರವರು ಸಹ ಅನೈತಿಕ ಸಂಬಂಧವಾದುದ್ದೆಂದು ಒಪ್ಪುತ್ತಾರೆ. ಎಸ್.ವ್ಹಿ.ರಂಗಣ್ಣನವರು ತಂದೆ ಹಾರುವ ಮಲ್ಲ ತಾಯಿ ಕುಂಬಾರ ಮಾಳಿ ಅರ್ಥಾತ್ ಮಾಸೂರಿನ ಮಲ್ಲರಸ ಅಥವಾ ಬಸವರಸ ಅಂಬಲೂರಿನ ಮಾಳವ್ವ ಎಂದಿದ್ದರೂ ಅವನು ಅಪ್ಪನ ಪೋಷಣೆಯಲ್ಲಾಗಲಿ ಅಮ್ಮನ ಪೋಷಣೆಯಲ್ಲಾಗಲಿ ಬೆಳೆದವನಲ್ಲ ವಿಧಿ ತಂದು ಕೊಟ್ಟ ದತ್ತು ಕೂಸು ಅವನು ಎಂದು ಅಭಿಪ್ರಾಯ ಪಡುತ್ತಾರೆ. ತ.ಸು.ಶ್ಯಾಮರಾಯರು ಧಾರವಾಡ ಜಿಲ್ಲೆಯ ಮಾಸೂರಿನ ಬಸವರಸನೆಂಬ ಆರಾಧ್ಯ ಬ್ರಾಹ್ಮಣ ಪುತ್ರಕಾಮಿಯಾಗಿ ಕಾಶಿಯಾತ್ರೆ ಮಾಡಿಕೊಂಡು ಮಾರ್ಗ ಮಧ್ಯದ ಅಬಲೂರಿನಲ್ಲಿ ಕುಂಬಾರನೊಬ್ಬನ ಮನೆಯಲ್ಲಿ ತಂಗಿದ. ಅಲ್ಲಿ ಕುಂಬಾರ ಮಾಳಿ ಎಂಬ ವಿಧವೆಯಲ್ಲಿ ಮೋಹಗೊಂಡು ಅವರಿಬ್ಬರ ಪ್ರಣಯದ ಫಲವಾಗಿ ಪುತ್ರರತ್ನವೊಂದು ಉದಯಿಸಿತು. ರಂ.ಶ್ರೀ.ಮುಗಳಿ ಯವರು ಸರ್ವಜ್ಞನ ಹುಟ್ಟನ್ನು ಕುರಿತು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ, ಅವನ ಚರಿತ್ರೆಯಲ್ಲಿ ಬಂದಿರುವ ಬಸವರಸ ಮತ್ತು ಕುಂಬಾರ ಮಾಳಿಯ ಪ್ರಣಯ ಕಥೆ ಸತ್ಯವಿರಲಿ ಬಿಡಲಿ ಅವನ ಜನ್ಮ ಅಸಂಪ್ರದಾಯಿಕವಾಗಿರಬಹುದೆಂದು ತೋರುತ್ತದೆ. ಸರ್ವಜ್ಞನ ಕುರಿತಾದ ಹುಟ್ಟಿನ ಬಗೆಗೆ ಚನ್ನಪ್ಪ ಉತ್ತಂಗಿಯವರು ನೀಡಿರುವ ಆಧಾರಗಳನ್ನೇ ಇಟ್ಟುಕೊಂಡು ಅನೇಕ ವಿದ್ವಾಂಸರು ಆತನ ಹುಟ್ಟಿನ ಗುಟ್ಟನ್ನು ಪರ–ವಿರೋಧವಾಗಿ ಅಭಿವ್ಯಕ್ತಿಸಿದ್ದುಂಟು. ಚನ್ನಪ್ಪ ಉತ್ತಂಗಿಯವರು ಹೇಳಿರುವಂತೆ ಸರ್ವಜ್ಞನ ಜೀವನ ಕುರಿತಾಗಿ ಯಾವುದೇ ಐತಿಹಾಸಿಕ ದಾಖಲೆಗಳಾಗಲಿ, ಶಾಸನಗಳಲ್ಲಾಗಲಿ ಲಭ್ಯವಿಲ್ಲದಿರುವುದರಿಂದ ಆತನ ವಚನಗಳಿಂದಲೇ ಉತ್ತಂಗಿ ಚನ್ನಪ್ಪನವರು ಶೋಧಿಸಿದ ನಿಲುವನ್ನೇ ಸಮರ್ಥಿಸಲಾಗಿದೆ.

## ಸರ್ವಜ್ಞ ಕವಿಯ ಕಾಲ

ಈ ಮೇಲಿನ ವಚನಗಳಿಂದ ಸರ್ವಜ್ಞ ೧೨ನೇ ಶತಮಾನದ ಬಸವಣ್ಣನ ನಂತರದಲ್ಲಿ ಬದುಕಿರಬಹುದೆಂಬ ಸುಳಿವು ನಮಗೆ ದೊರೆಯುತ್ತದೆ. ಆ ಜಾಡನ್ನು ಹಿಡಿದು ಸರ್ವಜ್ಞನ ಕುರಿತು ಸುದೀರ್ಘ ಅಧ್ಯಯನ ಮಾಡಿರುವ ಉತ್ತಂಗಿ ಚನ್ನಪ್ಪನವರು ಗುರುತಿಸಿದ ಕಾಲರೇಖೆಯನ್ನು ಇಟ್ಟುಕೊಂಡು ಪ್ರಯತ್ನಿಸಲಾಗಿದೆ.

ಉತ್ತಂಗಿ ಚನ್ನಪ್ಪನವರ ಅಭಿಪ್ರಾಯದಂತೆ ಸರ್ವಜ್ಞನ ಜನ್ಮಚರಿತ್ರೆಯ ಸಂಬಂಧ ನಮಗೆ ಸ್ಪಷ್ಟವಾದ ಬಾಹ್ಯಾಧಾರಗಳು ದೊರೆಯದಿದ್ದರೂ, ಅವನ ಗ್ರಂಥದಲ್ಲಿಯೆ ದೊರೆಯುವ ಕೆಲವು ವಚನಗಳಿಂದ ಊಹೆಯನ್ನು ಮಾತ್ರ ಮಾಡಬಹುದಾಗಿದೆ. ಆದರೆ ಈತನ ಕಾಲವನ್ನು ತಿಳಿಯುವುದಕ್ಕೆ ಈ ತರಹದ ಸೂಚನೆಗಳಾವುವೂ ಇರುವುದಿಲ್ಲ. ಹೀಗಿದ್ದರೂ ಇವನ ಕಾಲಜ್ಞಾನ ಪದ್ಧತಿಯಲ್ಲಿರುವ ಕೆಲವು ಪದ್ಯಗಳಿಂದ ಸಹಾಯಕವಾಗುವ ಒಂದು ಕಿರಣವು ಮಿನುಗುತ್ತಿರುವುದು. ಹಿಂದೆ ಹೇಳಿದ ಕಾಲಜ್ಞಾನ ಗ್ರಂಥದಲ್ಲಿ ಬರುವ ಕೆಲವು ಪದ್ಯಗಳು ಇವನ ತ್ರಿಪದಿ ಗ್ರಂಥದಲ್ಲಿಯೂ ದೊರೆಯುವುದರಿಂದ ಉಭಯ ಗ್ರಂಥಗಳಿಗೆ ಸಂಬಂಧವಿರುವಂತೆ ತೋರುತ್ತದೆ. ಹೇಗೆಯೇ ಇರಲಿ ಅಚ್ಚಾದ ಪ್ರತಿಗಳಲ್ಲಿರುವ ಕಾಲಜ್ಞಾನ ಪದ್ಯಗಳನ್ನು ಬರೆದ ಸರ್ವಜ್ಞನೂ, ಕಾಲಜ್ಞಾನ ಗ್ರಂಥವನ್ನು ಬರೆದ ಸರ್ವಜ್ಞನೂ ಒಬ್ಬನೇ ಎಂದು ತಿಳಿದ ಪಕ್ಷದಲ್ಲಿ ಇವನ ಕಾಲವನ್ನು ನಿರ್ಣಯಿಸುವುದಕ್ಕೆ ಕೆಲವು ಐತಿಹಾಸಿಕ ಸೂಚನೆಗಳು ದೊರೆಯುತ್ತವೆ ಅಚ್ಚಾದ ಪ್ರತಿಗಳಲ್ಲಿರುವ ಕಾಲಜ್ಞಾನ ಪದ್ಧತಿ ಯಲ್ಲಿ ವಿಜಯನಗರವು ಮಹಮ್ಮದೀಯರಿಂದ ನಾಶವಾದುದು, ಇಕ್ಕೇರಿ ಸಂಸ್ಥಾನ ಹಾಳಾದುದು, ಶ್ರೀರಂಗಪಟ್ಟಣ ಆಂಗ್ಲೇಯರ ವಶವಾದುದು, ಮುಂತಾದ ವಿಷಯಗಳನ್ನು ಹೇಳುವುದರಿಂದ 'ರೆವರೆಂಡ ಎಫ್.ಕಿಟೆಲ್ ಪಂಡಿತರು ಇವನ ಕಾಲವನ್ನು ಕ್ರಿ.ಶ. ಸುಮಾರು ೧೮೦೦ ಆಗಿರಬಹುದೆಂದೂ 'ರೆವರೆಂಡ ಇ.ಪಿ.ರೈಸ್‌ರೆಂಬುವರು ಸುಮಾರು ೧೬೬೦ ಆಗಿರಬಹುದೆಂದೂ ಬರೆದಿರುವರು. ಈ ವಿಷಯನ್ನು ಇತ್ತೀಚೆಗೆ ಹೊಸದಾಗಿ ಶೋಧಿಸಿದ 'ಶ್ರೀಮಾನ್ ಆರ್ ನರಸಿಂಹಾಚಾರ್ಯರು ೧೭೦೦ ಇರಲಾರದೆಂದು ನಾವು ಊಹಿಸುತ್ತೇವೆಂದು ಹೇಳುತ್ತಾರೆ. ಸಂಪಾದನೆಯ ಸಿದ್ಧವೀರಣಾಚಾರ್ಯರ ಕಾಲಕ್ಕೆ ಅಂದರೆ ೧೬೦೦ ಕ್ಕಿಂತ ಹಿಂದಿರಬೇಕೆಂದೂ ತರ್ಕಿಸುತ್ತಾರೆ ಅಭಿಪ್ರಾಯವನ್ನು ಸೂಚಿಸಿರುವ ಹಿನ್ನೆಲೆಯಲ್ಲಿ ಇವರೆಲ್ಲರೂ ಹೇಳಿದ ಕಾರಣಗಳಿಂದಲೂ ಮುಂದೆ ಬರುವ ಆಧಾರಗಳಿಂದಲೂ ಸರ್ವಜ್ಞ ಕವಿಯು ೧೬ನೆಯ ಶತಮಾನದವನೆಂದು ಸ್ವೀಕರಿಸಲ್ಪಟ್ಟು ಉತ್ತಂಗಿ ಚನ್ನಪ್ಪನವರು ಈ ಕೆಳಗಿನ ಆಧಾರಗಳನ್ನು ಕೊಟ್ಟಿರುತ್ತಾರೆ.

೧. ಸಂಪಾದನೆಯ ಸಿದ್ಧವೀರಣಾಚಾರ್ಯನು ಸರ್ವಜ್ಞನ ಕೆಲವು ಯಥೋಕ್ತಗಳನ್ನು ಉಲ್ಲೇಖಿಸಿದ್ದು ಇವನು ಸುಮಾರು ೧೬೦೦ ರಲ್ಲಿದ್ದಂತೆ ಆರ್.ನರಸಿಂಹಾಚಾರ್ಯರು ಹೇಳಿರುವರು. ಇದು ಸತ್ಯವಿದ್ದರೆ ಸರ್ವಜ್ಞನು ಸಿದ್ಧವೀರಣಾಚಾರ್ಯನ ಹಿಂದೆ ಅಂದರೆ ೧೬೦೦ಕ್ಕೆ ಮುಂಚೆ ಬದುಕಿದವನಾಗಿರಬೇಕೆಂದು ತಿಳಿದುಬರುತ್ತದೆ.

೨. ವೇಮನ ಸರ್ವಜ್ಞ ಸಂವಾದವೆಂಬದೊಂದು ಗ್ರಂಥವಿದ್ದಂತೆ ಮುಂದೆ ಗ್ರಂಥಾಧಾರ ಪಟ್ಟಿಯಲ್ಲಿ ಕೊಟ್ಟಿರುವೆವು. ಇದರಲ್ಲಿ ಇಬ್ಬರ ಪದ್ಯಗಳು ಹೆಚ್ಚು ಕಡಿಮೆ ಒಂದೇ ಅರ್ಥವುಳ್ಳವುಗಳಾಗಿ ಮೊದಲು ತೆಲುಗಿನಲ್ಲಿಯೂ ಕೆಳಗೆ ಕನ್ನಡದಲ್ಲಿಯೂ ಬರೆಯೋಣವಾಗಿವೆ. ಜ್ಞಾನ, ಜಾತಿ, ಆಚಾರ, ಭಕ್ತಿ, ವೈರಾಗ್ಯ, ಸ್ತ್ರೀಸ್ತುತಿನಿಂದೆ ಮುಂತಾದ ವಿಷಯಗಳಲ್ಲಿ ಉಭಯತರರು ಒಂದೇ ದೃಷ್ಟಿಯುಳ್ಳವರಾಗಿರುವುದರಿಂದ ಇವರು ಅದೇ ವಾತಾವರಣದಲ್ಲಿದ್ದವರಂತೆ ಭಾಸವಾಗುತ್ತದೆ. ಅನೇಕ ಕಡೆಗಳಲ್ಲಿ ಉಭಯತರರ ವಿಚಾರಗಳು ಹೋಲುತ್ತಿರುವುದರಿಂದ ಇವನು ವೇಮನನ ಸಮಕಾಲದವನಿದ್ದರೂ ಇರಬಹುದು. ತೆಲುಗು ಕವಿಯಾದ ಈ ವೇಮನನು ೧೬ನೆಯ ಶತಮಾನದಲ್ಲಿದ್ದಂತೆ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

೩. ಕಿಟೆಲ್ ಪಂಡಿತರು ಶಬ್ದಪ್ರಯೋಗ. ವಿಚಾರ ಸರಣಿ. ವ್ಯಾವಹಾರಿಕ ದೃಷ್ಟಾಂತ ಮೊದಲಾದ ವಿಷಯಗಳಲ್ಲಿ ಸರ್ವಜ್ಞನ ವಚನಗಳಿಗೂ ದಾಸರ ಪದಗಳಿಗೂ ವಿಶೇಷ

ಸಂಬಂಧವಿರುವುದೆಂದು ಸೂಚಿಸಿರುವುದರಿಂದಲೂ
ತುರುಕರಿಲ್ಲದ ಊರು ನರಕ ಭಾಜನಮಕ್ಕು ಎಂಬ ಪದ್ಯವು
ಪುರಂದರದಾಸರ ಪದಗಳಲ್ಲಿಯೂ ಸರ್ವಜ್ಞನಲ್ಲಿಯೂ ಸ್ವಲ್ಪ
ಹೆಚ್ಚು ಕಡಿಮೆ ಏಕಪ್ರಕಾರವಾಗಿ ಬರುವುದರಿಂದಲೂ
ಉಭಯತರರು ಒಂದೇ ಕಾಲದವರಾಗಿರಬಹುದೇನೋ ಎಂಬ
ಸಂದೇಹ ಉಂಟಾಗುತ್ತದೆ. ಸರ್ವಜ್ಞ, ವೇಮನ,
ಪುರಂದರದಾಸ ಈ ಮೂವರಲ್ಲಿ ಇಬ್ಬರು ಶಿವಭಕ್ತರೂ ಒಬ್ಬರು
ವಿಷ್ಣುಭಕ್ತರೂ ಇದ್ದು ಇವರ ತತ್ವ ವಿಚಾರಗಳು ಪರಸ್ಪರ
ವಿರುದ್ಧವಾಗಿದ್ದರೂ ಭಕ್ತಿರಹಿತ ಆಚಾರವನ್ನು
ಖಂಡಿಸುವುದರಲ್ಲಿ ಎಲ್ಲರಿಗೂ ಒಂದೇ ದೃಷ್ಟಿ ಇರುವುದು.
ನಿರ್ಜೀವವಾದ ಆಚಾರಗಳನ್ನು ಹಳಿಯುವಲ್ಲಿ ಒಬ್ಬರಿಗಿಂತ
ಒಬ್ಬರು ಹಿಂದಿನ ಉಪಮೆಗಳನ್ನು ಪ್ರಯೋಗಿಸಿರುವುದರಿಂದ
ಇವರೆಲ್ಲರೂ ಅಂತರಂಗವು ಬರಿದಾಗಿ ಬಹಿರಂಗವು ಬಾಡಿದ
ಕಾಲದಲ್ಲಿ ಬದುಕಿರಬೇಕೆಂದು ಭಾಸವಾಗುತ್ತದೆ. ಉತ್ತರದಲ್ಲಿ
ಪ್ರಾರಂಭವಾದ ಭಕ್ತಿಚಲನೆಯು ಚೈತನ್ಯಾದಿಗಳಿಂದ
ಬಲಗೊಂಡು ದಕ್ಷಿಣದಲ್ಲಿ ಪುರಂದರದಾಸರ, ತುಕಾರಾಮ
ಮೊದಲಾದವರಿಂದ ಮುಂದುವರಿಸಲ್ಪಟ್ಟು ಅವರು ಕೀರ್ತನೆಗಳ
ಮೂಲಕ ವೇದಾಂತ ಪರವಾದ ವಿಷ್ಣು ಭಕ್ತಿಯನ್ನು ಕನ್ನಡ
ನಾಡಿನಲ್ಲೆಲ್ಲ ಹಬ್ಬಿಸುತ್ತ ನಡೆದಿರಲು, ಅತ್ತಕಡೆ ಶಿವಭಕ್ತಿಯನ್ನು
ಪ್ರಜ್ವಲಿಸುವ ಅವಶ್ಯಕತೆ ಬಿದ್ದು ಸರ್ವಜ್ಞನು ರೂಢಗನ್ನಡದಲ್ಲಿ
ತನ್ನ ವಚನಗಳನ್ನು ರಚಿಸಿದನೆಂದು ತೋರುತ್ತದೆ.
ಪುರಂದರದಾಸನು ವಿಜಯನಗರದಲ್ಲಿದ್ದಂತೆಯೂ ೧೫೬೪ರಲ್ಲಿ
ವೈಕುಂಠವಾಸಿಯಾದಂತೆಯೂ ಕಿಟೆಲ್ ಪಂಡಿತರು
ನಿಶ್ಚಯಿಸಿದ್ದಾರೆ ಸರ್ವಜ್ಞನು ಇವನ ಸಮಕಾಲದವನಿದ್ದರೆ
೧೬ನೆಯ ಶತಮಾನದ ಕವಿಯೆಂದು ಹೇಳಬಹುದು.

**ಸರ್ವಜ್ಞನ ಊರು**

ಸರ್ವಜ್ಞನು ಹುಟ್ಟಿದ ಸ್ಥಳವು ಅಂಬಲೂರೆಂದು ಹಿಂದೆ
ಹೇಳಿದ್ದಾಯಿತು. ಈ ಗ್ರಾಮವು ಈಗಿನ ಅಬಲೂರು ಆಗಿದ್ದ
ಪಕ್ಷದಲ್ಲಿ ಅದು ಧಾರವಾಡ ಜಿಲ್ಲೆಗೆ ಸೇರಿದ ಹಿರೇಕೆರೂರಿನ
ಆಗ್ನೇಯಕ್ಕೆ ಏಳು ಮೈಲಿನ ದೂರ ಇರುವುದು. ಇದಕ್ಕೂ
ಮಾಸೂರಿಗೂ ಸುಮಾರು ೨೦ ಮೈಲು ಅಂತರ. ಮಾಸೂರು,
ಧಾರವಾಡ ಜಿಲ್ಲೆಗೂ ಮೈಸೂರು ಪ್ರಾಂತಕ್ಕೂ ನಡುವೆ ಇರುವ
ಗಡಿನಾಡಿಗೆ ಸೇರುವುದೊಂದು ದೊಡ್ಡ ಗ್ರಾಮವಾಗಿದೆ. ಇದರ
ಸಮೀಪದಲ್ಲಿರುವ ಅಬಲೂರು ಹಿಂದಿನ ಕಾಲದಲ್ಲಿ ಜೈನರ ಪ್ರಸಿದ್ಧ
ಕ್ಷೇತ್ರವು ಇದು ಬಸವೇಶ್ವರನ ಸಹಕಾಲದವನಾದ ಏಕಾಂತ
ರಾಮಯ್ಯನೆಂಬ ಲಿಂಗಾಯತ ಧರ್ಮ ಪುರಸ್ಕೃತನಿಗೆ, ಜೈನರಿಗೂ
ವೀರಶೈವರಿಗೂ ಉಂಟಾದ ಧರ್ಮಯುದ್ಧದಲ್ಲಿ ಮುಖ್ಯರಂಗಸ್ಥಳವು.
ಇದರಿಂದ ಸರ್ವಜ್ಞನು ಹುಟ್ಟಿದ ಈ ಊರು ಪೂರ್ವಕಾಲದಿಂದಲೇ
ಅನೇಕ ಧರ್ಮಜಾಗೃತಿಗಳಿಗೆ ಅನುಕೂಲ ಸ್ಥಳವಾಗಿತ್ತೆಂದು
ವಿಶದವಾಗುತ್ತದೆ.

ಸರ್ವಜ್ಞನಾದರೂ ಆಗಿನ ಕಾಲದ ವಾತಾವರಣದಂತೆ ಜೈನರನ್ನೂ
ಬ್ರಾಹ್ಮಣರನ್ನೂ ಖಂಡಿಸಿರುವುದು ಆತನ ಕುರಿತಾದ ಗ್ರಂಥಗಳಲ್ಲಿ
ಬರುವ ಆಯಾ ಹೆಸರಿನ ಪದ್ಧತಿಗಳಿಂದ ಸ್ಪಷ್ಟವಾಗುತ್ತದೆ.
ಸರ್ವಜ್ಞನು ರಚಿಸಿದ ಪದ್ಯಗಳಲ್ಲಿ ಒದರು, ಹಲ್ಲುಸುಲಿ, ಒರಸೆ, ಆಗಿ,
ಬಿಮ್ಮಗೆ, ಗೊದ, ದಾಯ, ಶಾನೆ, ದುಸ್ತು, ದೇವಾಂಗ, ಓಗಡು,
ಕಮ್ಮೆ, ಬೆರಣೆ, ಬಾಟೆ ಮುಂತಾದ ಅನೇಕ ಮೈಸೂರು ಪ್ರಾಂತದ
ಪ್ರಯೋಗಗಳು ಕಾಣುವುವಲ್ಲದೆ ನಾವುಗಳು ಎಂಬಂತೆ 'ಶ್ರೇಷ್ಠರು'
ಎಂಬುದಾಗಿ ಮೈಸೂರಿನ ಅತಿ ಬಹುವಚನವು
ಪ್ರಯೋಗವಾಗಿರುವುದರಿಂದ ಇವನು ಧಾರವಾಡ ಜಿಲ್ಲೆಗೂ
ಮೈಸೂರಿಗೂ ಮಧ್ಯದಲ್ಲಿರುವ ಮಾಸೂರಿನ ನೆರೆ
ಪ್ರದೇಶದವನಾಗಿರಬೇಕೆಂಬ ಸಂಗತಿಯು ಸತ್ಯವಾಗಿದ್ದಂತೆ
ತೋರುತ್ತದೆ.

ಇವನು ದೇಶಿ ಪದ್ಧತಿಯಲ್ಲಿ ಹೇಳಿರುವ ಪೂರ್ವ,ಪಶ್ಚಿಮ, ಉತ್ತರ,
ದಕ್ಷಿಣ, ನಾಡುಗಳು ಯಾವುವೆಂದು ನಿಶ್ಚಯಿಸಿ ಹೇಳಲಿಕ್ಕಾಗದಿದ್ದರೂ
ಇವನ ಜನ್ಮದೇಶವಾದ ಮಲೆನಾಡೆ ಇವುಗಳ ಕೇಂದ್ರ
ಸ್ಥಾನವಾಗಿರಬೇಕೆಂದು ತಿಳಿಯುತ್ತದೆ. ಶೀತ ಧಾತುಗಳುಂಟು
ಬಾತಿಹವು ಕುಕ್ಷಿಗಳು ಕಾಡೆಲ್ಲ ಕಸುಗಾಯಿ ನಾಡೆಲ್ಲ ಹೆಗ್ಗಿಡವು,
ಮಲೆನಾಡ ಕಾಡು ಸಾಕೆಂದ, ಎಂಬ ಉದ್ಗಾರಗಳಿಂದ ಇವನು
ಮಲೆನಾಡನ್ನು ಹಳಿದು ಬೆಳವಲ ಅಣಕ ನೋಡೆಂದ,
ಮೇಳನೋಡೆಂದ, ಊಟದ ಹವಣ ನೋಡೆಂದ, ಸುಡಬೇಕು
(ಬೆಳವಳ) ನಾಡೆಂದವನ ಬಾಯೊಳಗೆ ಪುಡಿಗಡಬು ಬೀಳ್ಗು
ಮುಂತಾದ ವಚನಗಳಿಂದ ಬೆಳವಲವನ್ನು ಹೊಗಳಿರುವಲ್ಲಿ
ಆರೋಗ್ಯಕ್ಕೂ ಊಟದ ಸೌಕರ್ಯಕ್ಕೂ ಮಲೆನಾಡಿಗಿಂತ
ಬೆಳವಲವೇ ಉತ್ತಮವಾದದ್ದೆಂದು ಹೇಳುತ್ತಾನೆ.ಅಂದಿನ
ಕರ್ನಾಟಕದಲ್ಲಿ ಪ್ರಚಾರವಾಗಿದ್ದ ನಾಣ್ಯದ ಹೆಸರುಗಳನ್ನೂ ಗಿಂಡಿ,
ಸುಂಡಿಲು ಗಿಂಡಿ, ಗಂಗಾಳಕಹಳೆ, ಸೀಗುರಿ, ಚಾಮರ, ಅಂದಣ,
ಸತ್ತಿಗೆ, ಸಾಣೇಕಲ್ಲು, ವೀಣೆ, ಬಿಲ್ಲು ಭೇರಿ, ಭಂಡಿ, ಗರಗಸ, ಕತ್ತಿ
ಮುಂತಾದ ಕೈಗಾರಿಕೆಯ ಸಾಮಾನುಗಳ ಹೆಸರುಗಳನ್ನೂ, ಹರಕು
ಹೋಳಿಗೆ, ಮುರುಕು ಹಪ್ಪಳ, ತಿಳಿದುಪ್ಪ, ರೊಟ್ಟಿ, ಅಂಬಲಿ, ನುಚ್ಚು,
ಮಜ್ಜಿಗೆ, ಮೊಸರು, ಪಳಿದೆ, ಅಂಬ್ರ ಉದ್ದಿನವಡೆ, ಕಣಕ, ಸುಟ್ಟ
ಬೆಳಸಿ ಮೊದಲಾದ ಆಹಾರದ ಹಾಗೂ ಮೇಲೋಗರಗಳ
ಹೆಸರುಗಳನ್ನೂ ಅಲ್ಲಲ್ಲಿ ತನ್ನ ವಚನಗಳಲ್ಲಿ ಉದ್ಧರಿಸುತ್ತಾನೆ.

**ಆಧಾರ ಗ್ರಂಥಗಳು**

1. ಸರ್ವಜ್ಞ ಕವಿ: ಜೀವನ ಯುಗ ಕಾವ್ಯ: ಕರ್ನಾಟಕ ವಿ.ವಿ.ಧಾರವಾಡ–೧೯೭೬
2. ಕವಿಚರಿತೆ: ದ್ವಿ.ಸಂಪುಟ
3. ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ತತ್ವ: ಕ ಸಾ ಪರಿಷತ್‌ಬೆಂಗಳೂರು–೧೯೮೩
4. ಸರ್ವಜ್ಞನ ಅಮರ ಸಂದೇಶ: ದೇಶಪಾಂಡೆ ಮನೋಹರರಾಯರು.–೧೯೫೯
5. ಸರ್ವಜ್ಞನ ಒಂದು ಸಮೀಕ್ಷೆ: ಬೆಂಗಳೂರು ವಿ.ವಿ–೧೯೭೫
6. ಸರ್ವಜ್ಞ ಜೀವನ ಕೃತಿಗಳು ಹಾಗೂ ಸಂದೇಶ: ಮ.–೧೯೭೦
7 ಸರ್ವಜ್ಞನ ವಚನಗಳು ವಿಶೇಷಾವೃತ್ತಿ ಉತ್ತಂಗಿ ಚನ್ನಪ್ಪ
8. ಸರ್ವಜ್ಞ ಕವಿ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ: ಪ್ರದೀಪ ಪ್ರಕಾಶನ ಬೆಂಗಳೂರು –೨೦೦೪
9. ಸರ್ವಜ್ಞನ ವಚನಗಳು: ಡಾ.ರಾಮೇಗೌಡರು.
10. ಸರ್ವಜ್ಞ ಶೈಲಿ: ಕಾವ್ಯಾಲಯ ಪ್ರಕಾಶನ ಮೈಸೂರು–೧೯೭೧
11. ಸರ್ವಜ್ಞನ ಸಾಹಿತ್ಯ ಕುರಿತ ಅಧ್ಯಯನಗಳು: ಸಂ.ಗ್ರಂಥ. ಸಂ.ವೀರೇಶ ಬಡಿಗೇರ–ಪ್ರಸಾರಂಗ ಕ.ವಿ.ವಿ.ಹಂಪಿ–೨೦೧೪
12. ಸರ್ವಜ್ಞ ಕವಿಯ ಜೀವನ ಚಿತ್ರಣ: ಸ.ಸ.ಮಾಳವಾಡ.